ಕರ್ನಾಟಕ ಸರ್ಕಾರ
(ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್)
ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ
ಕಾವೇರಿ ಭವನದ ಎದುರು, ಕೆಂಪೇಗೌಡ ರಸ್ತೆ, ಬೆಂಗಳೂರು-560002

ಸಂಖ್ಯೆ: ಸಿ4/ಅ.ಪ-01/2017-18

ದಿನಾಂಕ. 13/09/2017

## ಸುತ್ತೋಲೆ

ವಿಷಯ:- 2017-18ನೇ ಸಾಲಿನ ಮೊದಲನೇ ಸಂಕಲನಾತ್ಮಕ ಮೌಲ್ಯಾಂಕನಕ್ಕಾಗಿ ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು ಬಿಡುಗಡೆಗೊಳಿಸಿರುವ ವೇಳಾಪಟ್ಟಿಯನ್ನು ಅನುಸರಿಸುವ ಬಗ್ಗೆ.

ಉಲ್ಲೇಖ:- 1. ಈ ಕಛೇರಿ ಸುತ್ತೋಲೆ ಸಂಖ್ಯೆ:ಸಿ4/ಅ.ಪ-01/2017-18, ದಿನಾಂಕ:28-08-2017
2. ಆಯುಕ್ತರು, ಸಾ.ಶಿ.ಇ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ ಎ.ಡಿ.ಎಂ02/(01)ಪ್ರಾ.ಶಾ.ಶಿ ಪ್ರೌ.ಶಾ.ಶಿ.ಜೆ.19/2017-18, ದಿನಾಂಕ:-22-08-201
3. KSQAAC ಪರಿಷತ್ತಿನ ಸುತ್ತೋಲೆ ಸಂಖ್ಯೆ KSQAAC/ CSAS/04/2017-18, ದಿನಾಂಕ:28-08-2017 ಮತ್ತು 11-09-2017

*******

ಮೇಲ್ಕಂಡ ವಿಷಯ ಮತ್ತು ಉಲ್ಲೇಖ (1) ರಂತೆ 2017-18ನೇ ಸಾಲಿನ ಮೊದಲನೆ ಸೆಮಿಸ್ಟರ್ ಪರೀಕ್ಷೆಯನ್ನು ನಡೆಸುವ ಬಗ್ಗೆ ವೇಳಾಪಟ್ಟಿ ಹಾಗೂ ಮಾರ್ಗ ಸೂಚಿಯನ್ನು ಈ ಕಛೇರಿಯಿಂದ ನೀಡಲಾಗಿತ್ತು. ಆದರೆ ಉಲ್ಲೇಖ-3 ರಂತೆ ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಹಾಗೂ ಅಂಗೀಕರಣ ಪರಿಷತ್ (KSQAAC)ಯು ರಾಜ್ಯಾದ್ಯಂತ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಪ್ರೌಢಶಾಲೆಗಳಲ್ಲಿ ಏಕ ರೀತಿಯ ಮೌಲ್ಯಾಂಕನವನ್ನು ನಡೆಸಲು ಅನುಕೂಲವಾಗುವಂತೆ ಗೊತ್ತುಪಡಿಸಿರುವ ಸಾರ್ವತ್ರಿಕ ವೇಳಾ ಪಟ್ಟಿಯನ್ನು ಅನುಸರಿಸಬೇಕಾಗಿದ್ದು, ಉಲ್ಲೇಖ-1ರ ಸುತ್ತೋಲೆಯಲ್ಲಿ ತಿಳಿಸಲಾಗಿದ್ದ ವೇಳಾಪಟ್ಟಿಯನ್ನು ಹಿಂಪಡೆದು ಈ ಕೆಳಕಂಡ ವೇಳಾಪಟ್ಟಿಯನ್ನು ಅನುಸರಿಸಲು ತಿಳಿಸಿದೆ.

## ವೇಳಾಪಟ್ಟಿ

| ಶಾಲೆಗಳ ವಿಧ | ಮೌಲ್ಯಾಂಕನಕ್ಕೆ ಒಳಪಡುವ ತರಗತಿಗಳು | ಮೌಲ್ಯಾಂಕನ ನಡೆಸಲ್ಪಡುವ ದಿನಾಂಕ ಮತ್ತು ವಿಷಯಗಳು | | ಷರಾ |
|---|---|---|---|---|
| | | 27/10/2017 | 28/10/2017 | |
| ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು | 4 ಮತ್ತು 5ನೇ ತರಗತಿಯ ಎಲ್ಲಾ ಮಕ್ಕಳು | 1. ಪ್ರಥಮ ಭಾಷೆ<br>2. ದ್ವಿತೀಯ ಭಾಷೆ | 1. ಗಣಿತ<br>2. ಪರಿಸರ ಅಧ್ಯಯನ | ಅನುದಾನರಹಿತ ಶಾಲೆಗಳ 1-10 ನೇ ತರಗತಿಗೆ ಹಾಗೂ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿನ 1,2,3 ಮತ್ತು 10ನೇ ತರಗತಿ ಮಕ್ಕಳಿಗೆ ಹಾಗೂ ಇತರ ತರಗತಿಗಳಲ್ಲಿ KSQAAC ಮೌಲ್ಯಾಂಕನಕ್ಕೆ ಒಳಪಡಿಸಲಾಗದ ಇತರ ವಿಷಯಗಳ ಭಾಗ-ಬಿ ವಿಷಯಗಳಿಗೆ ಉಲ್ಲೇಖ-1 ರಲ್ಲಿ ನೀಡಲಾಗಿರುವ ವೇಳಾ ಪಟ್ಟಿಯನ್ನು ಅನುಸರಿಸಿ ಮೌಲ್ಯಮಾಪನ ಮಾಡತಕ್ಕದ್ದು. |
| | 6, 7, 8 ಮತ್ತು 9ನೇ ತರಗತಿಗಳ ಎಲ್ಲಾ ಮಕ್ಕಳು | 1. ಪ್ರಥಮ ಭಾಷೆ<br>2. ದ್ವಿತೀಯ ಭಾಷೆ<br>3. ತೃತೀಯ ಭಾಷೆ | 1. ಗಣಿತ<br>2. ವಿಜ್ಞಾನ<br>3. ಸಮಾಜ ವಿಜ್ಞಾನ | |

Scanned by CamScanner

**ಚನೆಗಳು**

1. ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಬೋಧಿಸಲ್ಪಡುತ್ತಿರುವ ಎಲ್ಲಾ ಮಾಧ್ಯಮಗಳಲ್ಲಿಯೂ ಈ ಮೌಲ್ಯಾಂಕನ ಪರೀಕ್ಷೆಯನ್ನು ನಡೆಸಲಾಗುವುದು.
2. 4 ಮತ್ತು 5ನೇ ತರಗತಿಯ ಮಕ್ಕಳಿಗೆ 4 ವಿಷಯಗಳಿಗೂ ಹಾಗೂ 6, 7, 8 ಮತ್ತು 9ನೇ ತರಗತಿ ಮಕ್ಕಳಿಗೆ 6 ವಿಷಯಗಳಿಗೂ ಮೌಲ್ಯಾಂಕನವನ್ನೂ ನಡೆಸಲಾಗುವುದು.
3. ಪ್ರತಿ ತರಗತಿಯ ಎಲ್ಲಾ ಭಾಷಾ ವಿಷಯಗಳಿಗೆ ಸಂಬಂಧಿಸಿದಂತೆ 1 ಪ್ರಶ್ನೆ ಪತ್ರಿಕೆಯನ್ನು ಮತ್ತು ಎಲ್ಲಾ ಕೋರ್ ವಿಷಯಗಳಿಗೆ ಸಂಬಂಧಿಸಿದಂತೆ ಮತ್ತೊಂದು ಪ್ರಶ್ನೆಪತ್ರಿಕೆಯನ್ನು ತಯಾರಿಸಲಾಗುವುದು.
4. ಎಲ್ಲಾ ತರಗತಿಗಳಿಗೂ ಬಹು ಆಯ್ಕೆ ಮಾದರಿಯ 24 ಪ್ರಶ್ನೆಗಳ ಪ್ರಶ್ನೆಪತ್ರಿಕೆಯನ್ನು 30 ಅಂಕಗಳಿಗಾಗಿ ರಚಿಸಲಾಗುವುದು.
5. ಪ್ರತಿ ತರಗತಿಯ ಪ್ರಶ್ನೆ ಪತ್ರಿಕೆಯನ್ನು ವಿಷಯವಾರು ರಚಿಸಿರುವ ಶ್ರೇಣೀಕೃತ ಸಾಮರ್ಥ್ಯಗಳಲ್ಲಿ ಹಿಂದಿನ ವರ್ಷದ ಶೇಕಡ 20ರಷ್ಟು ಸಾಮರ್ಥ್ಯಗಳನ್ನು ಹಾಗೂ ಪ್ರಸ್ತುತ ವರ್ಷ SA-1 ರ ಪಠ್ಯಕ್ರಮಕ್ಕೆ ಸಂಬಂಧಿಸಿದ ಶೇ 80 ರಷ್ಟು ಸಾಮರ್ಥ್ಯಗಳನ್ನು ಆಧರಿಸಿ ಪ್ರಶ್ನೆ ಪತ್ರಿಕೆಯನ್ನು ರಚಿಸಲಾಗುವುದು.
6. 4 ಮತ್ತು 5 ನೇ ತರಗತಿಗೆ ತಲಾ 2 ಗಂಟೆಯಂತೆ ಮತ್ತು 6, 7, 8 ಹಾಗೂ 9 ನೇ ತರಗತಿಗೆ ತಲಾ 2.45 ಗಂಟೆ/ನಿಮಿಷ ದಂತೆ ಪ್ರತಿ ಪರೀಕ್ಷೆಗೆ ವೇಳೆಯನ್ನು ನಿಗಧಿಪಡಿಸಲಾಗಿರುತ್ತದೆ.
7. ಪ್ರತಿ ಪ್ರಶ್ನೆ ಪತ್ರಿಕೆಯನ್ನು 4 ವರ್ಷನ್‌ಗಳಲ್ಲಿ ರಚಿಸಲಾಗುವುದು. ಮಕ್ಕಳು ತಮಗೆ ದೊರೆತ ಪತ್ರಿಕೆಯ ವರ್ಷನ್ ಕೋಡನ್ನು OMR ನಲ್ಲಿ ಶೇಡ್ ಮಾಡತಕ್ಕದ್ದು.
8. ಮುಖ್ಯೋಪಾಧ್ಯಾಯರು ಈಗಾಗಲೇ ಎಸ್.ಎ.ಟಿ.ಎಸ್ ತಂತ್ರಾಂಶದಲ್ಲಿ ಅಳವಡಿಸಿರುವ ಮಕ್ಕಳ ಹೆಸರನ್ನು ಆಧರಿಸಿ OMR ಗಳನ್ನು ಮುದ್ರಿಸಲಾಗಿದ್ದು ಮಕ್ಕಳು ತಮ್ಮ ಹೆಸರಿನ OMR ಪತ್ರಿಕೆಯಲ್ಲಿಯೇ ಸರಿ ಉತ್ತರದ ಬಬಲ್‌ಗಳನ್ನು ಬ್ಲೂ ಅಥವಾ ಬ್ಲಾಕ್ ಪಾಯಿಂಟ್ ಪೆನ್ನಿನಿಂದ ತಪ್ಪಾಗದಂತೆ ಶೇಡ್ ಮಾಡಬೇಕು.
ಎಸ್.ಎ.ಟಿ.ಎಸ್ ತಂತ್ರಾಂಶದಲ್ಲಿ ಅಳವಡಿಸಿರುವ ಮಕ್ಕಳ ಮಾಹಿತಿಯನ್ನೇ
9. ಪ್ರತಿ ಹಂತದಲ್ಲೂ ಎಸ್.ಎ.ಟಿ.ಎಸ್ ತಂತ್ರಾಂಶದಲ್ಲಿ ಅಳವಡಿಸಿರುವ ಮಕ್ಕಳ ಮಾಹಿತಿಯನ್ನೇ ಸಿ.ಆರ್.ಪಿ ಗಳು ತಮ್ಮ ಹಂತದ
ಅನುಸರಿಸಿರುವುದರಿಂದ ಶಾಲಾ ಮುಖ್ಯಸ್ಥರು ಮತ್ತು ಸಂಬಂಧಿಸಿ ಸಿ.ಆರ್.ಪಿ ಗಳು ತಮ್ಮ ಹಂತದ ಖಚಿತಪಡಿಸಿಕೊಳ್ಳತಕ್ಕದ್ದು.
ಎಸ್.ಎ.ಟಿ.ಎಸ್‌ನಲ್ಲಿ ಅಳವಡಿಸಿರುವ ಮಾಹಿತಿಯು ನಿಖರವಾಗಿರುವ ಬಗ್ಗೆ ಇಂದೀಕರಿಸಿಕೊಳ್ಳ
ತಪ್ಪಿದ್ದರೆ ಇಲ್ಲವೇ ಯಾವುದೇ ಮಕ್ಕಳ ಮಾಹಿತಿಯು ಬಿಟ್ಟು ಹೋಗಿದ್ದರೆ ಕೂಡಲೇ
ತಕ್ಕದ್ದು.
ರಿಪೋರ್ಟ್
10. OMR ಉತ್ತರ ಪತ್ರಿಕೆಗಳನ್ನು ಜಿಲ್ಲಾ ಹಂತದಲ್ಲಿ ಸ್ಕ್ಯಾನಿಂಗ್, ಡಾಟಾ ಕ್ಲೀನಿಂಗ್, ರಿಪೋರ್ಟ್ ಜನೇರೇಷನ್ ಮಾಡಿ ಫಲಿತಾಂಶವನ್ನು ಸಿದ್ಧಪಡಿಸಿ ಮೊದಲನೇ ಸಂಕಲನಾತ್ಮಕ ಪರೀಕ್ಷೆ (SA-1)
ಎಂದು ಪರಿಗಣಿಸಿ ಮಕ್ಕಳ ಎಸ್.ಎ.ಟಿ.ಎಸ್ ನಲ್ಲಿ ನಮೂದಿಸಬೇಕಾಗಿರುತ್ತದೆ.
11. ಮೌಲ್ಯಾಂಕನವನ್ನು ನಡೆಸಲು ಪ್ರತಿ ಶಾಲೆಗೂ OBSERVER ನ್ನು ನೇಮಕ ಮಾಡುವ ಮೂಲಕ ಪರೀಕ್ಷೆಯ ಗೌಪ್ಯತೆ ಮತ್ತು ಪಾವಿತ್ರ್ಯತೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ಸಹಿ/-
ಉಪನಿರ್ದೇಶಕರು (ಆಡಳಿತ)
ಬೆಂಗಳೂರು ಗ್ರಾಮಾಂತರ ಜಿಲ್ಲೆ

**ಪ್ರತಿಗಳು**

1. ಕ್ಷೇತ್ರ ಶಿಕ್ಷಣಾಧಿಕಾರಿಗಳು, ದೇವನಹಳ್ಳಿ, ದೊಡ್ಡಬಳ್ಳಾಪುರ, ನೆಲಮಂಗಲ ಮತ್ತು ಹೊಸಕೋಟೆ ತಾಲ್ಲೂಕುಗಳಿಗೆ KSQAAC ಸುತ್ತೋಲೆಯೊಂದಿಗೆ ಈ ಸುತ್ತೋಲೆಯನ್ನು ಅನುಬಂಧಿಸಿ, ಅಗತ್ಯ ಕ್ರಮಕ್ಕಾಗಿ ರವಾನಿಸಿದೆ.
2. ಈ ಕಛೇರಿಯ ಶಿಕ್ಷಣಾಧಿಕಾರಿಗಳಿಗೆ, ಎಸ್.ಎಸ್.ಎ ಮತ್ತು ಆರ್.ಎಂ.ಎಸ್.ಎ ಉಪಯೋಜನಾ ಸಮನ್ವಯಾಧಿಕಾರಿಗಳಿಗೆ ಮತ್ತು ಸಹಾಯಕ ಸಮನ್ವಯಾಧಿಕಾರಿಗಳಿಗೆ ಮಾಹಿತಿಗಾಗಿ.
3. ಜಿಲ್ಲೆಯ ಎಲ್ಲಾ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳಿಗೆ ನೀಡುತ್ತಾ, ಸಿ.ಆರ್.ಪಿ. ಮತ್ತು ಬಿ.ಆರ್.ಪಿ. ಸರ್ಕಾರಿ/ ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲಾ ಮುಖ್ಯ ಶಿಕ್ಷಕರಿಗೆ ತಲುಪಿಸುವಂತೆ ಸೂಚಿಸಿದೆ.
4. ಈ ಕಛೇರಿಯ ಎಲ್ಲಾ ವಿಷಯ ಪರಿವೀಕ್ಷಕರಿಗೆ ಮಾಹಿತಿಗಾಗಿ ನೀಡಲಾಗಿದೆ.
5. ಕಛೇರಿ ಪ್ರತಿ.

Scanned by CamScanner